# DAY & DATE: MONDAY, APRIL 20th, 2026

## Matter: “Open Day - 2026”

**As appeared in the Newspapers:**

**VIJAYA KARNATAKA**
(State, Page No. 04)

# ಬಿಎನ್‌ಎಂಐಟಿಯಲ್ಲಿ ಓಪನ್ ಡೇ

**ಬೆಂಗಳೂರು:** ಜಗತ್ತಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸಲು 'ಓಪನ್ ಡೇ'ನಂತಹ ಕಾರ್ಯಕ್ರಮಗಳನ್ನು ಪ್ರತಿ ಕಾಲೇಜಿನಲ್ಲೂ ಆಯೋಜಿಸುವ ಅಗತ್ಯವಿದೆ ಎಂದು ಆಟೋಮೋಟಿವ್ ಹರ್ಮಾನ್ ಇಂಟರ್‌ನ್ಯಾಷನಲ್ ಸಂಸ್ಥೆಯ ನಿರ್ದೇಶಕ ಶೈಲೇಶ್ ಸಕ್ರಿ ತಿಳಿಸಿದರು.

ಬಿಎನ್‌ಎಂಐಟಿ ಕಾಲೇಜಿನಲ್ಲಿ ಆಯೋಜಿಸಿದ್ದ 'ಓಪನ್ ಡೇ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ''ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿಯೇ ಪ್ರಾಜೆಕ್ಟ್ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಮೂಲಕ ಅವರಲ್ಲಿರುವ ಸೃಜನಶೀಲತೆಯನ್ನು ಗುರುತಿಸುವ ಕೆಲಸ ಪ್ರತಿ ಕಾಲೇಜಿನಲ್ಲಿಯೂ ನಡೆಯಬೇಕು. ಇದರಿಂದ, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕಲಿಕೆ ಕುರಿತು ಹೆಚ್ಚಿನ ಆಸಕ್ತಿ ದೊರೆಯುತ್ತದೆ. ಜತೆಗೆ, ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿಯಾಗಲಿದೆ,'' ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮನೋಜ್ ಕುಮಾರ್ ಕೊಳ್ಳಾ ಮಾತನಾಡಿ, ''ಬಿಎನ್‌ಎಂಐಟಿ'ಯು ಓಪನ್ ಡೇ ಎಂಬ ವಿನೂತನ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಉದ್ಯಮದ ತಜ್ಞರಿಂದ ವೈಜ್ಞಾನಿಕ ಮತ್ತು ತಾಂತ್ರಿಕ ಮಾಹಿತಿಯನ್ನು ಒದಗಿಸುತ್ತಿದೆ. ಇದು ಭವಿಷ್ಯದಲ್ಲಿ ವಿದ್ಯಾರ್ಥಿಗಳು ತಾಂತ್ರಿಕ ಪರಿಣತಿ ಹೊಂದಲು ಮತ್ತು ನವೋದ್ಯಮಿಗಳಾಗಲು ಸಹಕಾರಿಯಾಗಲಿದೆ,'' ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಇಸ್ರೊ, ಬಿಎಚ್‌ಇಎಲ್, ಡಿಆರ್‌ಡಿಒ, ಎಚ್‌ಎಂಟಿ ಸೇರಿದಂತೆ ನಾನಾ ಸಂಸ್ಥೆಗಳು ತಮ್ಮ ನಾನಾ ನೂತನ ಯೋಜನೆಗಳ ಕುರಿತು ಮಾಹಿತಿ ನೀಡಿದವು.



'ಓಪನ್ ಡೇ' ಪ್ರಯುಕ್ತ ವಿದ್ಯಾರ್ಥಿಗಳು ಪ್ರಾಜೆಕ್ಟ್‌ಗಳನ್ನು ಪ್ರದರ್ಶಿಸಿದರು.

ಜತೆಗೆ, ಎಐ ತಂತ್ರಜ್ಞಾನ ಸೇರಿದಂತೆ 100ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಈ ವೇಳೆ ಬಿಎನ್‌ಎಂಐಟಿ ಅಧ್ಯಕ್ಷ ನಾರಾಯಣರಾವ್ ಆರ್.ಮಾನೆ, ಹೆಚ್ಚುವರಿ ನಿರ್ದೇಶಕ ಡಾ. ಎಸ್.ವೈ.ಕುಲಕರ್ಣಿ, ನಿರ್ದೇಶಕ ಪ್ರೊ. ಟಿ.ಜೆ.ರಾಮಮೂರ್ತಿ ಉಪಸ್ಥಿತರಿದ್ದರು.